'ನಾನು ನಿಮಗೆ ಆ ವಿಷಯವನ್ನು ತಿಳಿಸಬೇಕು ಎಂದೇ ನಾನು ಇಲ್ಲೇ ಕಿಟಕಿಯ ಮುಂದೆ ಆಗಿನಿಂದ ಕೂತಿದ್ದೇನೆ' ಎನ್ನುತ್ತಾ ಕಿಟಕಿಯನ್ನು ತೋರಿಸಿದರು ಸದಾಶಿವ.

'ಪಾಯಿಂಟ್ ತ್ರೀಟು– ಒಂದು ಹಳೆಯ ಮಿಲ್ಟ್ರಿ ವಿನ್ಯಾಸದ ಪಿಸ್ತೂಲಿನಿಂದ ಗುಂಡು ಹಾರಿಸಲಾಗಿದೆ. ಆತ ನಿಮ್ಮ ಮನೆಯ ಹಿಂದಿರುವ ಫೆನ್ಸ್ ಮೂಲಕ ಗುಂಡು ಹಾರಿಸಿದ್ದಾನೆ. ಪೇವ್‌ಮೆಂಟ್ ಮೇಲೆ ನಿಂತು ಫೈರ್ ಮಾಡಿದ್ದಿದ್ದರೆ ಗುಂಡುಗಳು ಇನ್ನೂ ಸ್ವಲ್ಪ ಮೇಲಕ್ಕೆ ಹೋಗುತ್ತಿದ್ದವು. ಇದರ ಆಧಾರದ ಮೇಲೆ, ಆತ ನಿಮ್ಮ ಫ್ಲಾಟ್‌ನ ಆವರಣದೊಳಕ್ಕೇ ಬಂದು ನಿಮಗೆ ಗುರಿ ಇಟ್ಟಿದ್ದಾನೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ನೀವು ಇದು ಯಾರ ಕೆಲಸವಾಗಿರಬಹುದು ಎಂದು ಅಂದುಕೊಳ್ತೀರಿ?' ಕೇಳಿದರು ಇನ್‌ಸ್ಪೆಕ್ಟರ್.

'ನನಗೆ ಗೊತ್ತಿಲ್ಲ... ನಾನು ಅವನನ್ನು ನೋಡಲೂ ಇಲ್ಲ!'

'ಈ ನಿಮ್ಮ ಸಮಾಧಾನ ನಮ್ಮ ತನಿಖೆಗೆ ಏನೇನೂ ಉಪಯೋಗಕ್ಕೆ ಬರುವುದಿಲ್ಲ. ನಿಮಗೆ ಯಾರ ಮೇಲಾದರೂ ಸಂಶಯವಿದ್ದರೆ ತಿಳಿಸಿ.'

'ಸಂಶಯಿಸುವುದಾ! ನಾನು ಆ ಸ್ಕೌಂಡ್ರಲ್‌ನ್ನು ನೋಡಲಾಗಲಿಲ್ಲ. ಹೊರಗೆ ಆಗಲೇ ಕತ್ತಲಾವರಿಸಿತ್ತು. ಸ್ಪಷ್ಟವಾಗಿ ಏನೂ ಕಾಣಿಸುತ್ತಿರಲಿಲ್ಲ. ಅವನು ಯಾರೋ ನನಗೆ ತಿಳಿದಿದ್ದರೆ, ವಿಷಯವನ್ನು ನಿಮ್ಮಿಂದ ಮುಚ್ಚಿಡ್ತಿದ್ನಾ? ಇಷ್ಟಕ್ಕೂ ನನಗೆ ಅಂತಹ ಶತ್ರುಗಳೂ ಇಲ್ಲ' ಖಚಿತವಾಗಿ ಹೇಳಿದರು ಸದಾಶಿವ.

'ನಿಮ್ಮ ಸಾವಿನಿಂದ ಯಾರಿಗಾದರೂ ಲಾಭ ಇದೆಯಾ?'

'ಅಂಥಾದ್ದೇನಿಲ್ಲ! ನಾನು ಶ್ರೀಮಂತನೇನಲ್ಲ, ಸಾಮಾನ್ಯರಂತೆ ತಿಂಗಳ ಸಂಬಳದಲ್ಲಿ ಜೀವನ ನಡೆಸೋನು.'

'ಇದು ಕಳ್ಳರ ಕೆಲಸವಲ್ಲ. ಅಗತ್ಯವಿಲ್ಲದೆ ಕಳ್ಳರು ಅನಗತ್ಯವಾಗಿ ಗುಂಡುಗಳನ್ನು ಹಾಳು ಮಾಡುವುದಿಲ್ಲ. ನಿಮ್ಮ ಮೇಲೆ ಯಾರಿಗೋ ದ್ವೇಷ ಇದೆ. ನೀವು ಈ ಹಿಂದೆ ಯಾರಿಗಾದರೂ, ಏನಾದರೂ ದ್ರೋಹ ಅಥವಾ ಅಂಥಾದ್ದೇನಾದ್ರೂ ಮಾಡಿ, ನಿಮ್ಮನ್ನು ದ್ವೇಷಿಸುವಂತೆ ಮಾಡಿಕೊಂಡಿದ್ದೀರಾ? ಹಾಗೇನಾದರೂ ಇದ್ದರೆ ಹೇಳಿ, ನಮ್ಮ ತನಿಖೆಯನ್ನು ಮುಂದುವರಿಸಲು ಅನುಕೂಲವಾಗುತ್ತದೆ.'

ಪೆಚ್ಚಾದ ಸದಾಶಿವರ ಮುಖ ಪೇಲವವಾಯಿತು. ಇಲ್ಲಿಯವರೆಗೂ ಅವರು ಆ ದೃಷ್ಟಿಕೋನದಿಂದ ಯೋಚಿಸಿರಲಿಲ್ಲ.

'ಅಂಥವರ್‍ಯಾರಿದ್ದಾರೋ ನೆನಪಿಗೆ ಬರುತ್ತಿಲ್ಲ. ನನ್ನದು ರಾಜ್ಯ ಸೇವಾ ಆಯೋಗದಲ್ಲಿ ಕಾರ್ಯದರ್ಶಿ ವೃತ್ತಿ. ಮೇಲಾಗಿ ಬ್ರಹ್ಮಚಾರಿ. ಇಲ್ಲಿಯವರೆಗೆ ನೆಮ್ಮದಿಯ ಜೀವನ ನಡೆಸಿಕೊಂಡು ಬಂದಿದ್ದೇನೆ. ಯಾರಿಗಾದರೂ ನನ್ನ ಮೇಲೆ ದ್ವೇಷ ಯಾಕಿರುತ್ತದೆ ಅಂತ ಕೇಳ್ತೀನಿ! ಆ ವಿಚಾರವೇ ನನ್ನ ಮನಸ್ಸಿನಲ್ಲಿ ಇಲ್ಲ. ನಾನು ಬೇರೆಲ್ಲಿಗೂ ಹೋಗುವುದಿಲ್ಲ. ಇತರರ ವ್ಯವಹಾರಗಳಲ್ಲೂ ಮೂಗು ತೂರಿಸುವುದಿಲ್ಲ.'

'ಸರಿ! ನಾಳೆ ಇಡೀ ದಿನ ನೀವು ಮತ್ತೊಂದು ಸಾರಿ ಯೋಚಿಸಿ ನೋಡಿ. ಈ ರಾತ್ರಿ ನಿಮಗೊಬ್ಬರಿಗೇ ಇಲ್ಲಿರಲು ಭಯ ಇಲ್ಲ ತಾನೆ? ಬೇಕಿದ್ದರೆ ಅಗತ್ಯ ರಕ್ಷಣೆ ಒದಗಿಸುತ್ತೇವೆ' ಎಂದರು ಇನ್‌ಸ್ಪೆಕ್ಟರ್.

'ಇಲ್ಲ! ಆದರೆ ಅಸಲು ನನ್ನ ಮೇಲೆ ಗುಂಡು ಹಾರಿಸಿದವರು ಯಾರು? ಆಫೀಸಿನಲ್ಲಿ ಕೆಲಸ ಮಾಡಿ ಮನೆಗೆ ಬರುತ್ತೇನೆ. ಕೆಲಸ ಏನಾದರೂ ಬಾಕಿ ಉಳಿದರೆ, ಅದನ್ನು ಮನೆಗೆ ತಂದು